ದಿನಾಂಕ 26-08-2022 ರಂದು ಶುಕ್ರವಾರ ಬೆಳಗ್ಗೆ 11:00 ಗಂಟೆಗೆ ಅನ್ನಸಂದ್ರ ಪಾಳ್ಯದ, ಬಿ.ಬಿ.ಎಂ.ಪಿ ಯೋಗ ಸೆಂಟರ್‌ನಲ್ಲಿ ವಾರ್ಡ್ ಸಂಖ್ಯೆ:93 ರ, ಶ್ರೀ.ಕೃಷ್ಣಮೂರ್ತಿ, ಸಹಾಯಕ ಕಂದಾಯ ಅಧಿಕಾರಿ (Nodel Officer) ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.

**ಹಾಜರಿದ್ದ ಅಧಿಕಾರಿಗಳು ಹಾಗೂ ಸಾರ್ವಜನಿಕರು :**

| | |
|---|---|
| 1. | ಶ್ರೀ. ಜಿ.ಡಿ.ಸೋಮಯ್ಯ (ಸಹಾಯಕ ಅಭಿಯಂತರರು) |
| 2. | ಶ್ರೀ. ವಿ.ಮಂಜುನಾಥ್ (ಕಂದಾಯ ನಿರೀಕ್ಷಕರು) |
| 3. | ಶ್ರೀ. ಜಯಪ್ರಕಾಶ್ (ತೆರಿಗೆ ನಿರೀಕ್ಷಕರು) |
| 4. | ಶ್ರೀ. ನರಸಿಂಹ ಮೂರ್ತಿ ( ಬಿ.ಡಬ್ಲ್ಯೂ.ಎಸ್.ಎಸ್.ಬಿ ಕೆಲಸದ ಪರಿವೀಕ್ಷಕರು |
| 5. | ಶ್ರೀ. ಎಸ್.ರಮೇಶ್ |
| 6. | ಶ್ರೀ. ಸದಾನಂದ |
| 7. | ಶ್ರೀ. ದೈಸ್ಯ.ಎಸ್ |
| 8. | ಶ್ರೀ. ರತ್ನಮ್ಮ |
| 9. | ಶ್ರೀ. ಎಮ್.ಎಸ್.ಬಾಲಸುಬ್ರಮಣ್ಯ |
| 10. | ಶ್ರೀ. ವಿ.ನಾಗರಾಜ್ ರೆಡ್ಡಿ |
| 11. | ಶ್ರೀ. ಎಮ್.ಎಸ್.ನಾಗರಾಜ್ |
| 12. | ಶ್ರೀ. ಸುಭಾಷ್ |
| 13. | ಶ್ರೀಮತಿ.ರಾಧ |
| 14. | ಶ್ರೀಮತಿ. ನಿರ್ಮಲ |
| 15. | ಶ್ರೀ. ಆಯುಬ್ |
| 16. | ಶ್ರೀ.ವಿ.ಎಸ್.ಎಸ್.ಪಾಟೀಲ್ |
| 17. | ಶ್ರೀ.ವಿಜಯ್ ಕುಮಾರ್ |
| 18. | ಶ್ರೀ.ಯುಕ್ತಿಯರ್ |
| 19. | ಶ್ರೀ.ಬಿ.ಗಿ.ಮುರುಗ |

| | |
|---|---|
| 20. | ಶ್ರೀಮತಿ.ಕವಿತಾ |
| 21. | ಶ್ರೀ.ಜಾಯ್ ಕಮಲ್ |
| 22. | ಶ್ರೀ.ಕೆ.ಆರ್.ಸಿ. ವಾರಿಯರ್ಸ್ |
| 23. | ನಿವಾಸಿ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸಾರ್ವಜನಿಕರು. |

ಮಾನ್ಯ ಅಧ್ಯಕ್ಷರು ಹಾಜರಿದ್ದ ಅಧಿಕಾರಿಗಳು, ವಾರ್ಡ್ ಸಮಿತಿ ಸದಸ್ಯರು ಹಾಗೂ ರೆಸಿಡೆಂಟ್ಸ್ ವೆಲ್ಫೇರ್ ಆಸೋಸಿಯೆಷನ್‌ನ ಅಧ್ಯಕ್ಷರುಗಳು, ಪ್ರತಿನಿಧಿಗಳು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸುತ್ತಾ, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಈ ಹಿಂದೆ ನಡೆದ ಸಭೆಯ ನಡವಳಿಗಳನ್ನು ಓದಿ ರೆಕಾರ್ಡ್ ಮಾಡಲಾಯಿತು.

1) **ಕೋವಿಡ್-19 ಸಾಂಕ್ರಮಿಕ ರೋಗಕ್ಕೆ ಸಂಬಂಧಿಸಿದಂತೆ, ನಾಲ್ಕನೇ ಅಲೆಯನ್ನು ನಿಯಂತ್ರಿಸುವ ಬಗ್ಗೆ ಮತ್ತು ಸೊಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗ್ರತ ಕ್ರಮಗಳ ಬಗ್ಗೆ.**

ಈ ಕುರಿತು ಚರ್ಚಿಸಲಾಗಿ, ವಾರ್ಡ್‌ನಲ್ಲಿ ಕೋವಿಡ್-19 ನಾಲ್ಕನೇ ಅಲೆಗೆ ಸಂಬಂಧಪಟ್ಟ ಸೋಂಕು ಹರಡುವುದನ್ನು ತಡೆಗಟ್ಟುವ ಎಲ್ಲಾ ಮುಂಜಾಗ್ರತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಯಿತು.

2) **ಬೀದಿ ದೀಪಗಳ ನಿರ್ವಹಣೆ ಬಗ್ಗೆ:-**

ವಾರ್ಡ್ ವ್ಯಾಪ್ತಿಯಲ್ಲಿ ಬರುವ ಇಸ್ಲಾಂಪುರ 1ನೇ ಮುಖ್ಯರಸ್ತೆ, ಎಲ್ಲಮ್ಮ ದೇವಸ್ಥಾನದ ಹಾಗೂ ರೆಡ್ಡಿಪಾಳ್ಯ ಬೀದಿ ದೀಪಗಳು ಸಮರ್ಪಕವಾಗಿ ಉರಿಯುತ್ತಿಲ್ಲವೆಂದು ಸಾರ್ವಜನಿಕರು ತಿಳಿಸಿದರು, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಕ್ರಮ ವಹಿಸಿ ವರದಿ ಮಾಡಲು ಸೂಚಿಸಲಾಯಿತು.

ಕ್ರಮಕ್ಕಾಗಿ:-ವಾರ್ಡ್ ಅಭಿಯಂತರರು.

3) **ವಿದ್ಯುತ್ ಸರಬರಾಹು (ಬೆಸ್ಕಾಂ)ಗೆ ಸಂಬಂದಿಸಿದ ವಿಷಯದ ಬಗ್ಗೆ:-**

ವಾರ್ಡ್ ವ್ಯಾಪ್ತಿಯ ಜಗದೀಶ್ ನಗರದ 2ನೇ ಮುಖ್ಯರಸ್ತೆ, 3ನೇ ಮುಖ್ಯರಸ್ತೆ ವಿದ್ಯುತ್ ಕಂಭ ದುರಸ್ಥಿಯಾಗಿರುತ್ತದೆ ಹಾಗೂ ಬೀಳುವ ಹಂತದಲ್ಲಿದ್ದು ಸರಿಪಡಿಸಬೇಕೆಂದು ಸರಿಪಡಿಸಬೇಕೆಂದು ಸಾರ್ವಜನಿಕರು ಕೋರಿರುತ್ತಾರೆ, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಕ್ರಮ ವಹಿಸಿ ವರದಿ ಮಾಡಲು ಸೂಚಿಸಲಾಯಿತು.

ಕ್ರಮಕ್ಕಾಗಿ:- ಬೆಸ್ಕಾಂ ಅಭಿಯಂತರರು.

**4) ವಾರ್ಡ್‌ನ ವಿವಿಧ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ:-**

ಶ್ರೀ ಯುಕ್ತಿಯರ್ ರವರು ಮಾತಾನಾಡಿ ಇಸ್ಲಾಂಪುರದ 1ನೇ ಮುಖ್ಯರಸ್ತೆಯ ರಸ್ತೆ ಕಾಮಗಾರಿಯು ಬಾಕಿಯಿದ್ದು ಕೂಡಲೇ ರಸ್ತೆ ಕಾಮಗಾರಿಯನ್ನು ಪ್ರಾರಂಭಿಸಲು ಕೋರಿದರು ಹಾಗೂ ಶ್ರೀ.ರಮೇಶ್‌ರವರು ಮಾತಾನಾಡಿ ರೆಡ್ಡಿಪಾಳ್ಯ ಹಾಗೂ ಕಿಟ್ಟಣ್ಣ ಹೋಟೆಲ್ ರಸ್ತೆಯ ಚರಂಡಿಯ ಹುಳು ಎತ್ತಲು ಕೋರಿರುತ್ತಾರೆ.

ಕ್ರಮಕ್ಕಾಗಿ:-ವಾರ್ಡ್ ಅಭಿಯಂತರರು.

**5) ಇನ್ನಿತರೆ ವಿಷಯಗಳು ಅಧ್ಯಕ್ಷರ ಸೂಚನೆಯಂತೆ:-**

ಈ ಕುರಿತು ಸಾರ್ವಜನಿಕರು ಮಾತನಾಡಿ ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್ ವ್ಯಾಪ್ತಿಯ ಅನ್ನಸಂದ್ರಪಾಳ್ಯ 3ನೇ ಮುಖ್ಯರಸ್ತೆಯಲ್ಲಿ ಸಮರ್ಪಕವಾಗಿ ಕುಡಿಯುವ ನೀರು ಸರಬರಾಜು ಆಗುತ್ತಿಲ್ಲವೆಂದು ಅದ್ದಕ್ಕೆ ಗೇಟ್ ವಾಲ್ ಬೇಕೆಂದು ಕೋರಿರುತ್ತಾರೆ ಹಾಗೂ ಅನ್ನಸಂದ್ರಪಾಳ್ಯ ಮುಖ್ಯರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯ ಚರಂಡಿ ಚೇಂಬರ್‌ಗಳು ರಸ್ತೆಯ ಮೇಲ್ಮೈನಿಂದ ತಂಗಿರುತ್ತದೆ ಆದ್ದರಿಂದ ಅನ್ನಸಂದ್ರಪಾಳ್ಯ ಮುಖ್ಯರಸ್ತೆಯ ಎಲ್ಲಾ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯ ಚರಂಡಿ ಚೇಂಬರ್‌ಗಳನ್ನು ರಸ್ತೆಯ ಮೇಲ್ಮೈಗೆ ಸಮವಾಗಿ ನಿರ್ಮಿಸಬೇಕೆಂದು ಹಾಗೂ ಅನ್ನಸಂದ್ರಪಾಳ್ಯ ಮುಖ್ಯರಸ್ತೆಯಲ್ಲಿ ವಾಹನ ದಟ್ಟನೆ ಹೆಚ್ಚಾಗಿರುವುದರಿಂದ ವಾಹನ ದಟ್ಟನೆಯನ್ನು ನಿಯಂತ್ರಿಸಲು ಸೂಕ್ತ ಕ್ರಮ ವಹಿಸಬೇಕೆಂದು ಸಾರ್ವಜನಿಕರು ಕೋರಿರುತ್ತಾರೆ.

ವಾರ್ಡ್ ಕಮಿಟಿ ಕಾರ್ಯದರ್ಶಿ ಹಾಗೂ ನೋಡಲ್ ಅದಿಕಾರಿಗಳು
ಸಹಾಯಕ ಕಂದಾಯ ಅಧಿಕಾರಿ
ಹೆಚ್.ಎ.ಎಲ್ ಏರ್‌ಪೋರ್ಟ್ ಉಪ ವಿಭಾಗ

**ಪ್ರತಿಯನ್ನು:**

1. ಮಾನ್ಯ ಜಂಟಿ ಆಯುಕ್ತರು, ಮಹದೇವಪುರ ವಲಯ ರವರ ಮಾಹಿತಿಗಾಗಿ ರವಾನಿಸಿದೆ.
2. ಮುಖ್ಯ ಅಭಿಯಂತರರು, ಮಹದೇವಪುರ ವಲಯ ರವರ ಮಾಹಿತಿಗಾಗಿ ರವಾನಿಸಿದೆ.
3. ಸಹಾಯಕ ಕಾರ್ಯಪಾಲಕ ಅಭಿಯಂಯತರರು, ಘಣ ತಾಜ್ಯ ನಿರ್ವಹಣೆ ಕೆ.ಆರ್.ಪುರಂ ರವರ ಮಾಹಿತಿಗಾಗಿ ಕಳುಹಿಸಿದೆ.
4. ಕಛೇರಿ ಪ್ರತಿ.